ಕೊಡಗಿನ ಗಡಿಭಾಗದಿಂದ ಮರ ಹೇರಿ ಬರುವ ಲಾರಿಗಳೇ ಗತಿ. ಅತ್ತಲಿಂದ ಬರುವ ಲಾರಿಗಳಿಗೆ ಕೈ ತೋರಿಸುತ್ತಲೇ ನಡೆದೆ. ಏಳನೆಯದೋ ಎಂಟನೆಯದೋ ಲಾರಿಯಲ್ಲಿ ಹತ್ತಿಕುಳಿತೆ. ಡ್ರೈವರು ಮತ್ತು ಕ್ಲೀನರ್ ಮಾವನ ಊರಿನ ರಾಜಕೀಯ ಸಂಘರ್ಷದ ಕತೆಗಳನ್ನೇ ಚರ್ಚಿಸುತ್ತಿದ್ದರು. ಅಂದು ಕೂಡ ಇಬ್ಬರು ಸತ್ತರಂತೆ. ಸತ್ತವರು ಯಾರು? ನನ್ನ ಹತ್ತಿರದ ಪರಿಚಯದವರೆ? ಯಾರೇ ಆಗಿರಲಿ, ನಾನು ಅಲ್ಲಿಂದ ಕಂಬಿಕಿತ್ತಿದ್ದೇ ಒಳ್ಳೆಯದಾಯಿತು. ನಾನು ಸುರಕ್ಷಿತವಾಗಿ ಉಳಿದುಕೊಂಡೆನಲ್ಲ!

ರೈಲಿನಲ್ಲಿ ಜಯರಾಮನ ಪರಿಚಯವಾಯಿತು. ಜನಪ್ರಿಯ ಕಾದಂಬರಿಯೊಂದರಿಂದ ತಪ್ಪಿಸಿಕೊಂಡು ಬಂದ ಕಥಾಪಾತ್ರವೆಂದು ಅವನು ತನ್ನನ್ನು ಪರಿಚಯಿಸಿಕೊಂಡ. ಬಹಳಷ್ಟು ಅಧ್ಯಾಯಗಳಲ್ಲಿ ಅವನು ತನ್ನ ಪ್ರಿಯತಮೆಯೊಂದಿಗೆ ಪ್ರಣಯ ಸಲ್ಲಾಪದಲ್ಲಿ ತೊಡಗಿಸಿಕೊಂಡಿದ್ದಾಗಿ ಹೇಳಿಕೊಂಡ. ಕೊನೆಕೊನೆಗೆ ಅವಳು ತನ್ನ ಶತ್ರುವನ್ನು ಪ್ರೀತಿಸಿದ್ದಾಗಿ ಅವನಿಗೆ ಮನದಟ್ಟಾಯಿತು. ಆದರೆ ಜಯರಾಮನಿಗೆ ಅವಳು ಹಾಗಂದುಕೊಂಡಿದ್ದು ತಿಳಿದಿರಲಿಲ್ಲ. ಅವಳಿಗೋಸ್ಕರ ಅವನು ಏನೂ ಮಾಡಲು ಸಿದ್ಧನಿದ್ದ. ರಿಜಿಸ್ಟರ್ಡ್ ಮ್ಯಾರೇಜ್, ಊರು ಬಿಡುವುದು, ಒಂದೇ ಮರದ ರೆಂಬೆಯಲ್ಲಿ ಹಗ್ಗ ಕಟ್ಟಿ... ಪರಿಹಾರದ ಹಲವಾರು ಹಾದಿಗಳನ್ನು ಯೋಚಿಸಿದ್ದ. ಆದರೆ ಜನಪ್ರಿಯ ಕಥೆಗಾರನಾದ ದೇವರ ಅಲಕ್ಷ್ಯದಿಂದಿರಬೇಕು, ಒಂದೇ ಅಧ್ಯಾಯದಲ್ಲಿ ಮೂವರು ಸೇರುತ್ತಾರೆ. ಬಹುಶಃ ಕಥೆಗಾರ ಕಾದಂಬರಿಯನ್ನು ಬೇಗನೆ ಮುಗಿಸಿಬಿಡಲು ನಿರ್ಧರಿಸಿರಬೇಕು. ಖಳನಾದವನು ನಾಯಕನ ವೇಷ ಧರಿಸಿ ತುಂಬಾ ಮುಂದೆ ಹೋಗಿದ್ದಾನೆಂದು ಜಯರಾಮ ಪತ್ತೆ ಹಚ್ಚಿದ. ಇದಕ್ಕೆ ಪರಿಹಾರ, ಕದ್ದು ಓಡುವುದೊಂದೇ ಎಂದು ಜಯರಾಮ ಅಂದುಕೊಂಡ. ಆದರೆ ಜನಪ್ರಿಯ ಕಥೆಯಾದುದರಿಂದ ಅದು ಅಲ್ಲಿಗೇ ಮುಗಿಯಲಾರದು. ನಾಯಕ ಹತ್ತು ಅಧ್ಯಾಯದ ನಂತರ ವಾರಪತ್ರಿಕೆಯಿಂದ ಹೊರದಬ್ಬಲ್ಪಡುತ್ತಾನೆ.

ಮೂರು ಸ್ಟೇಷನ್ನುಗಳನ್ನು ದಾಟುವಷ್ಟರಲ್ಲಿ ಜಯರಾಮ ಕಥೆಯನ್ನು ನಿಲ್ಲಿಸಿದ್ದ.

ಇನ್ನು ನನ್ನ ಸಂಭ್ರಮದ ಕಥೆ ಹೇಳಬಹುದೆನಿಸಿತು. ನಾನು ಹೇಳತೊಡಗಿದೆ. ಅಕ್ಕಪಕ್ಕದವರೆಲ್ಲ ಜನಪ್ರಿಯ ಕಥೆಯನ್ನು ಕೇಳಿ ತೂಕಡಿಸುತ್ತಿದ್ದುದರಿಂದ ಸಂಭ್ರಮದ ಕಥೆ ಜಯರಾಮನಲ್ಲಿ ಮಾತ್ರ ದಾಖಲಾಯಿತು. ನಾನು ಎಲ್ಲವನ್ನೂ ಹೇಳಿದೆ. ಜಯರಾಮ ಎಲ್ಲವನ್ನೂ ಗಮನವಿಟ್ಟು ಕೇಳಿಸಿಕೊಂಡ. ಸಿಗ್ನಲ್ ಸಿಗದೇ ಇದ್ದುದರಿಂದ ರೈಲು ನಿಂತುಕೊಂಡಿತ್ತು. ನೀರಸವಾದ ಸಮಯ. ಜಯರಾಮ ಯೋಚನೆಗೀಡಾದ. ಅದರಿಂದ ಅವನು ಹೊರಬರುವವರೆಗೂ ನನಗದು ಸಂಭ್ರಮದ ಸಮಯವಾಗಿತ್ತು. ಚಿಂತಕ ಏನು ಉಪದೇಶ ನೀಡಬಲ್ಲ? ಕೊನೆಗೆ ಅವನು ಹೇಳತೊಡಗಿದ.

ಪಕ್ಷದ ಸಮಸ್ಯೆ ಎಲ್ಲಾ ಕಡೆ ಇರುವುದೇ. ಆದರೆ ರಕ್ತದಾಟ ಇದೆಯಲ್ಲ, ಅದು ನಿಜವಾದ ಸವಾಲು. ವಿಶೇಷವಾಗಿ ತೆಯ್ಯಂ ಮತ್ತು (ಕಳರಿಪಯಟ್ಟ್ ಎಂಬುದು ಭಾರತ ಮತ್ತು ವಿಶ್ವದ ಅತ್ಯಂತ ಪ್ರಾಚೀನ ಸಮರ ಕಲೆಗಳಲ್ಲಿ ಒಂದು. ಅದರಲ್ಲಿ ನಿಪುಣನಾಗಿದ್ದವನು ಚರಿತ್ರವೀರ ಮುಬಾರಿನ ಥಚ್ಚೋಳಿ ಒಥೇನನ್) ಥಚ್ಚೋಳಿ ಒಥೇನನ್ ದೇಹಕ್ಕೂ ಮನಸ್ಸಿಗೂ ಆವಾಹಿಸಿಕೊಂಡಿರುವ ನಿನ್ನ ಊರಿನವರ ರಕ್ತದಾಹ ಅಪಾಯಕಾರಿ. ಇನ್ನು ಮುಂದೆ ನೀನು ಆ ಕಡೆ ಹೋಗಬೇಡ. ನೀನು ಮಾಡಬೇಕಾಗಿದ್ದು ಪಕ್ಷವನ್ನು ಹಳ್ಳಿಗೆ ಕೊಂಡೊಯ್ಯುವ ಕೆಲಸ. ಎಲ್ಲರೂ ಒಂದೇ ಪಕ್ಷಕ್ಕೆ ಸೇರಿದವರಾಗಿದ್ದರೆ, ಆ ಹಳ್ಳಿಯಲ್ಲಿ ಸುಖ ಸಂತೋಷವಿರುತ್ತದೆ. ಹೊರಜಗತ್ತಿನೊಂದಿಗೆ ಅವರಿಗೆ ಯಾವುದೇ ಸಂಪರ್ಕವಿರುವುದಿಲ್ಲ. ಅದರ ಬಗ್ಗೆ ಅವರು ಯೋಚಿಸುವುದೂ ಇಲ್ಲ. ಕಾಲಕಾಲಕ್ಕೆ ಬೆಳೆ ಕೊಡುತ್ತಾರೆ. ಚುನಾವಣೆ ಬಂದರೆ ಮತ ಚಲಾಯಿಸುತ್ತಾರೆ. ಮೆರವಣಿಗೆಯಲ್ಲಿ ಸೇರಿ ಜೈಕಾರ ಹಾಕುತ್ತಾರೆ. ಆಗಲೇ ಅವರು ತಲೆಯೆತ್ತಿ ನಿಂತಿರುವ ಕಟ್ಟಡಗಳನ್ನು ಕೆಳಮಟ್ಟದಲ್ಲಿ ಹಾರಾಡುವ ವಿಮಾನಗಳನ್ನು ನೋಡುವುದು. ಪ್ರತಿಯೊಂದು ಮೆರವಣಿಗೆಯು ಅವರಿಗೆ 'ಪಿಕ್‌ನಿಕ್'ನಂತಿರುತ್ತದೆ. ಕೋಣಗಳನ್ನು ಒಯ್ಯುವಂತೆ ಹಗ್ಗದಿಂದ ಕಂಬಕ್ಕೆ ಬಿಗಿದು ಲಾರಿಯಲ್ಲಿ ವರ್ಷಕ್ಕೊಮ್ಮೆ ನಗರ ವೀಕ್ಷಣೆಗೆ ಹೋಗುವುದೂ ಒಂದು ಸಂಭ್ರಮವೇ. ಅಂತಹದೊಂದು ಹಳ್ಳಿಗೆ ಹೋಗಿ ಅಲ್ಲಿರುವ ಪಕ್ಷ ಯಾವುದೆಂದು ತಿಳಿದು ಅದರಲ್ಲಿ ಸೇರಿಕೊಳ್ಳಬೇಕು. ಪಕ್ಷಕ್ಕೆ ಹೊಸದಾಗಿ ಸೇರುವವರಿಗೆ ತೊಡೆಕೊಬ್ಬಿದ ಹೋರಿಯ ತಲೆಯನ್ನು ಕತ್ತರಿಸಲಾಗುತ್ತದೆ. ಜೊತೆಗೆ ಅಪ್ಪಂನ ತುಣುಕುಗಳನ್ನು ಚಂದಕ್ಕೆ ಕತ್ತರಿಸಿ ಬಡಿಸುತ್ತಾರೆ. ದ್ರಾಕ್ಷಿಗೊಂಚಲುಗಳನ್ನು ಜಗಿದು ತಿನ್ನುವ ಸಲುವಾಗಿ ಎತ್ತರದಲ್ಲಿ ಕಟ್ಟಿ ತೂಗಾಡಿಸುತ್ತಾರೆ. ಕೆಲಸ... ಊಹೂಂ.. ಅವೆಲ್ಲವನ್ನು ಪಕ್ಷದ ಕಾರ್ಯಕರ್ತರು ನೋಡಿಕೊಳ್ಳುತ್ತಾರೆ. ನಿನ್ನ ಮದುವೆಯನ್ನು ಕೂಡ ಅವರೇ ಮಾಡಿಸುತ್ತಾರೆ. ಪಕ್ಷ ಹೇಳಿದ ಯುವತಿಗೆ ತಾಳಿ ಕಟ್ಟಿದರೆ ಪಕ್ಷವೇ ನಿನಗೆ ರಕ್ಷಣೆ ನೀಡುತ್ತದೆ. ಅಂದಮಾತ್ರಕ್ಕೆ ನೀನು ಸುಮಿತ್ರಾಳನ್ನು ಮರೆಯಬೇಕೆಂದೇನೂ ನಾನು ಹೇಳುತ್ತಿಲ್ಲ. ಎರಡು ಹೊತ್ತಿನ ಊಟದ ನಂತರ ಅವಳೊಂದಿಗೆ ಕಳೆದ ಮಧುರ ನೆನಪುಗಳನ್ನು ಮೆಲುಕು ಹಾಕುತ್ತಾ ಕಾಲದೂಡಬಹುದು.

ಜಯರಾಮ ಹೇಳಿದ್ದೆಲ್ಲವನ್ನು ನಾನು ಮನಸ್ಸಿನಲ್ಲಿಯೇ ಕಲ್ಪಿಸಿದೆ. ಅದಕ್ಕೆ ಸೂಕ್ತವಾದ ಬಣ್ಣಗಳನ್ನು ಹಚ್ಚಿನೋಡಿದೆ. ಎಲ್ಲವನ್ನು ಒಟ್ಟು ಸೇರಿಸಿ ಚಲನಚಿತ್ರವನ್ನಾಗಿಸಿ ಓಡಿಸಿ ನೋಡಿದೆ... ಗುಡ್... ವೆರಿಗುಡ್. ಸರಿ, ಮುಂದೆ ಯಾವ ಸ್ಟೇಷನ್ನಿನಲ್ಲಿ ಇಳಿಯುವುದು?

ಜಯರಾಮನ ಪ್ರಶ್ನೆ ನನ್ನನ್ನು ಎಚ್ಚರಿಸಿತು. ನಿಜವಾಗಿಯೂ ಅದು ನನಗೆ ಗೊತ್ತಿರಲಿಲ್ಲ.

'ಟಿಕೆಟ್ಟು ಕೊಂಡಿಲ್ಲವಾದುದರಿಂದ ಎಲ್ಲಿ ಬೇಕಾದರೂ ಇಳಿಯಬಹುದು' ನಾನು ಹೇಳಿದೆ.

'ಒಳ್ಳೆಯದೇ ಆಯಿತು. ಮುಂದಿನ ಸ್ಟೇಷನ್ನಿನ್ನಲ್ಲಿ ಇಳ್ಕೋ. ನಾನು ಹೇಳಿದೆಲ್ಲಾ ನೆನಪಿದೆಯಲ್ಲ... ಒಳ್ಳೆಯದಾಗಲಿ.'

ಜಯರಾಮ ಕೇಕೆಹಾಕುತ್ತಾ, ಹಾಡು ಗುನುಗುತ್ತಾ ಮುಂದಕ್ಕೆ ಹೋದ. ಜಯರಾಮ ಸೂಜಿ ಮೊನೆಯಂತಾಗುವಷ್ಟು ದೂರದವರೆಗೆ ಕೈಯೆತ್ತಿ ಬೀಸುತ್ತಲೇ ಇದ್ದ. ನಾನು ಸ್ತಬ್ಧನಾಗಿ ನಿಂತೇ ಇದ್ದೆ. ನಷ್ಟ ಪ್ರಜ್ಞೆಯನ್ನು ರೈಲಿನಲ್ಲಿಯೇ ಬಿಟ್ಟು, ರೈಲು ಹಳಿಗಳಿಂದ ನಿರ್ಮಿತವಾದ ಸಂದಿಯೊಳಗಿನಿಂದ ಸ್ಟೇಷನ್ನಿಂದ ಹೊರಬಿದ್ದೆ.

ಒಬ್ಬ ರಾಜಕೀಯ ಸಂಶೋಧಕನಂತೆ ನಾನು ತುಂಬಾ ದಿನಗಳು ವಿವರ ಶೇಖರಣೆಗಾಗಿ ಅಲೆದಾಡಿದೆ. ಬಸ್ ಕಂಡಕ್ಟರ್, ಪತ್ರಿಕೆ ಹಂಚುವವನು, ಮೀನು ಮಾರುವವನು, ಸೇಂದಿ ಇಳಿಸುವವನು – ಹೀಗೆ ಹಲವಾರು ಮಂದಿ ನನ್ನ ಸಹಾಯಕ್ಕೆ ಬಂದರು. ಸಿಕ್ಕಿದ ವಿವರಗಳನ್ನೆಲ್ಲಾ ಕಲೆ ಹಾಕಿ ವಿಶ್ಲೇಷಣೆ ಮಾಡಿದೆ. ಕೆಲವೊಂದನ್ನು ತುಲನಾತ್ಮಕ ಅಧ್ಯಯನಕ್ಕೆ ಒಡ್ಡಿದೆ. ಅಲ್ಲಿಂದ ನಾನು ಶ್ರೀಮಂಗಲ ಎಂಬ ಹಳ್ಳಿಗೆ ಪಾದಯಾತ್ರೆ ಆರಂಭಿಸಿದೆ. ಖಾದಿಶರ್ಟು, ಪಂಚೆ, ಮನೋರಮ ಪತ್ರಿಕೆ, ಮಾತೃಭೂಮಿ ಡೈರಿ, ನಗ್ನ ಪಾದ...

ನಾನು ಶ್ರೀಮಂಗಲ ತಲುಪಿದ ದಿನ ಮಂಡಲ ಸಮಾವೇಶ ನಡೆಯುತ್ತಿತ್ತು. ನನ್ನ ಹಳೆಯ ಪಕ್ಷದಂತೆ ಇದಕ್ಕೆ 'ಕೇಡರ್' ಸ್ವಭಾವವೇನೂ ಇರಲಿಲ್ಲವೆಂಬುದನ್ನು ನಾನು ಮೊದಲೇ ಕಂಡುಕೊಂಡಿದ್ದೆ. ಒಂದು ವಿಷಯದಲ್ಲಿ ಮಾತ್ರ ಇವರು ಎಚ್ಚರಿಕೆ ವಹಿಸಿದ್ದರು; ಹಳೆಯ ಖಾದಿಯನ್ನು ಒಗೆದು ಇಸ್ತ್ರಿ ಹಾಕುವುದರಲ್ಲಿ.

ಪಂಚಾಯತ್‌ನಿಂದ ನಿರ್ಮಿಸಿದ ಹಾಲ್‌ಗೆ ನಾನು ಪ್ರವೇಶಿಸಿದ್ದು ಯಾರ ಗಮನಕ್ಕೂ ಬರಲಿಲ್ಲ. ಬೋಂಡ ಮತ್ತು ಚಹ ಸೇವಿಸುತ್ತಾ ಮಂಡಲಿ ಸಮಿತಿಯ ಕಾರ್ಯದರ್ಶಿ ಓದುತ್ತಿದ್ದ ವರದಿಯನ್ನು ನಾನು ಗಮನವಿಟ್ಟು ಕೇಳುತ್ತಿದ್ದೆ. ಅಧ್ಯಕ್ಷರ ಭಾಷಣದಲ್ಲಿದ್ದ ಚೆನ್ನಾಗಿರುವ ಕೆಲವು ಪ್ರಯೋಗಗಳನ್ನು ನಾನು ಗುರುತು ಹಾಕಿಕೊಂಡೆ. ವೇದಿಕೆಯಲ್ಲಿ ಅವರಿಬ್ಬರು ಮಾತನಾಡುತ್ತಿಲ್ಲವೆಂಬ ಸತ್ಯವನ್ನು ನಾನು ಪತ್ತೆ ಹಚ್ಚಿದೆ.

ಮಧ್ಯಾಹ್ನ ಮೃಷ್ಟಾನ್ನ. ಪಾಯಸವನ್ನು ಕುಡಿದು ಎಲೆ ಮಡಚಿ ಹರಟೆ ಹೊಡೆಯುತ್ತಾ ಎಲ್ಲರೂ ಹಾಲ್‌ಗೆ ಬಂದರು. ವರದಿಯಲ್ಲಿ ಏನಾದರೂ ಚರ್ಚೆ ಮಾಡುವಂತಹ ವಿಷಯವಿದೆಯೇ ಎಂದು ಅಧ್ಯಕ್ಷರು ಮೈಕಿನಲ್ಲಿ ಸಭಿಕರನ್ನು ಕೇಳಿದರು. ಏನಾದರೂ ಇದ್ದರೆ ಎದ್ದು ನಿಂತು ಕೇಳಬಹುದೆಂದು ಮತ್ತೆ ಮತ್ತೆ ಕೇಳಿಕೊಂಡರು. ಯಾರೂ ಎದ್ದು ಕೇಳಲಿಲ್ಲ. ಎಲ್ಲರೂ ಮಧ್ಯಾಹ್ನದ ಭೋಜನದ ಆಲಸ್ಯದಲ್ಲಿ ಮೈ ಮರೆತಿದ್ದರು. ಇದೇ ಸರಿಯಾದ ಸಂದರ್ಭವೆಂದು ನಾನು ಡೈರಿ, ಪತ್ರಿಕೆಗಳನ್ನು ಹಿಡಿದು ಕೈಯೆತ್ತಿ ತೋರಿಸಿದೆ.

'ವೇದಿಕೆಗೆ ಬನ್ನಿ' ಅಧ್ಯಕ್ಷರು ಆಹ್ವಾನಿಸಿದರು.

ನಾನು ನನ್ನ ಪರಿಚಯ ಹೇಳಿಕೊಂಡೆ. ನಿರುದ್ಯೋಗಿ ಯುವಕ ನಾನೆಂದು ಒತ್ತಿ ಹೇಳಿದೆ. ಕಾರ್ಯದರ್ಶಿಯ ವರದಿಯನ್ನು ಮೊನಚಾದ ಮಾತುಗಳಿಂದ ವಿಮರ್ಶಿಸಿದೆ. ಮಂಡಲ ಸಮಿತಿ ಒಂದು ಡಕೋಟ ಗಾಡಿಯೆಂದು, ಅಧ್ಯಕ್ಷರು ಅವರ ಡ್ರೈವರೆಂದು ಹೇಳಿ ಖ್ಯಾತ ಹಾಸ್ಯನಟ ಅಡೂರ ಭಾಸಿಯ ಸಿನಿಮಾ ಹಾಡನ್ನು ಹಾಡಿದೆ.

(ಸಶೇಷ)